ಶ್ರೀ ಬಿ. ಶಿವರಾಮಂ.— ಸ್ವಾಮಿ, ವಾಟಾಳ್ ನಾಗರಾಜ್‌ರವರು ಹೇಳಿದ್ದಾದು ಸರಿಯಿದೆ. ನಮ್ಮ ಹಾಸನ ಜಿಲ್ಲೆಯಲ್ಲಿ ಒಂದು ಲೀಟರ್ ಸೀಮೆಎಣ್ಣೆ ೫ ರೂಪಾಯಿಗೂ ಸಿಗುತ್ತಿಲ್ಲ, ಎಲ್ಲಾ ಕಡೆ ಜನರೂ ಕ್ಯೂನಲ್ಲಿ ನಿಂತಿರುತ್ತಾರೆ. ಎಲ್ಲಾ ಕಡೆ ಇದರ ತೊಂದರೆ ಇದೆ. ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

SRI AZEEZ SAIT.— As far as kerosene is concerned I have made all efforts to increase but on the contrary I think in the coming months what we are going to get that will be reduced.

ಶ್ರೀ ಬಿ. ಶಿವರಾಮಂ.— ಕೊನೆಯ ಪಕ್ಷ ತಾವು ಇರತಕ್ಕ ರೇಟಿಗೆ ಮಾರಾಟಮಾಡತಕ್ಕ ವ್ಯವಸ್ಥೆಯನ್ನಾದರೂ ಮಾಡಿ. ಅಧಿಕಾರಿಗಳು ಈ ಕಡೆ ಗಮನ ಕೊಡಲಿ.

ಶ್ರೀ ಅಜೀಜ್ ಸೇಟ್.— ಮಾಡುತ್ತೇನೆ.

ಅಧ್ಯಕ್ಷರು,— ಮಾನ್ಯ ಬಾಬುಗೌಡ ಪಾಟೀಲ್, ಸೋಮಪ್ಪ ಸುವರ್ಣ, ಕೋಳಿವಾಡ ವಿರ್ಗೆ, ರಾಜಾ ಅಮರೇಶ ನಾಯಕ್, (ಸದಸ್ಯರುಗಳು ಸಭೆಯಲ್ಲಿ ಹಾಜರಿರಲಿಲ್ಲ)

(ವಾಲ್ಯನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು)

ಶ್ರೀ ಎಂ. ವಿ. ಗುತ್ತೇಗಾರ್ (ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

ಶ್ರೀ ಬಿ. ಮೋತಕಪಲ್ಲಿ.— ಮಾನ್ಯ ಸಭಾಧ್ಯಕ್ಷರೆ,

ಅಧ್ಯಕ್ಷರು.— ನೀವು ಮೋತಕಪಲ್ಲಿಯವರಲ್ಲವೇ?

ಶ್ರೀ ಡಿ. ಮಂಜುನಾಥ್.— ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದು ಮನವಿ, ಇಂಥ ಪ್ರಾಮುಖ್ಯವಾದ ಪ್ರಶ್ನೆಗಳು ಬಂದಾಗ, ತಾವು ಅಪ್ಪಣೆ ಕೊಟ್ಟರೆ ನಾವು ಕೇಳುವುದಕ್ಕೆ ಅನುಕೂಲವಾಗುತ್ತದೆ. ಈ ಹಿಂದೆ ಇಂತಹ ಒಂದು ಪರಿಪಾಠ ಇತ್ತು. ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.— ನನಗೆ ಎಲ್ಲವೂ ಪ್ರಾಮುಖ್ಯವೆ. ಇದು ಪ್ರಾಮುಖ್ಯ, ಅದು ಅಪ್ರಾಮುಖ್ಯ ಎಂದು ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ (ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು
ಹೇಮಾವತಿ ಎಡದಂಡೆ ನಾಲಾ ಕೆಲಸ

೧೯೯೨. ಶ್ರೀ ಎಸ್. ಶಫಿ ಅಹಮದ್ (ತುಮಕೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಹೇಮಾವತಿ ಎಡದಂಡೆ ನಾಲೆ ಕೆಲಸ ಪ್ರಸ್ತುತವಾಗಿ ಯಾವ ಹಂತದಲ್ಲಿದೆ ? ಹಾಗೂ ಭೂಗಸಂದ್ರ ಅವಾನಿಕೆರೆಗೆ ಯಾವಾಗ ತಲಪುವುದು ;

ಆ) ಈ ಕೆಲಸ ಯಾವಾಗ ಪೂರ್ಣಗೊಳ್ಳುವುದು ;

ಇ) ಈ ಬಗ್ಗೆ ಈವರೆಗೆ ವ್ಯಯ ಮಾಡಿರುವ ಮೊತ್ತ ;

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೇಮಾವತಿ ಎಡದಂಡೆ ನಾಲೆಯು, ತುಮಕೂರು ಉಪ ನಾಲೆಯು ಪಂಕ್ತಿಕಿರಣ ೧೨೬ನೇ ಕಿ. ಮೀ. ನಲ್ಲಿ ಭುಗುಡನಹಳ್ಳಿ ಅವಾನಿಕೆರೆ ಸಮೀಪ ಹಾಯುವುದು. ತುಮಕೂರು ಉಪ ನಾಲೆಯ ಕೆಲಸಗಳು ವಿವಿಧ ಹಂತದಲ್ಲಿದ್ದು, ೧೯೯೨ನೇ ಸಾಲಿನ ಅಂತ್ಯದಲ್ಲಿ ಈ ಭಾಗದವರೆಗೂ ನಾಲೆಯ ಕೆಲಸ ಗಳನ್ನು ಪೂರ್ಣಗೊಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ) ೧೯೯೨ನೇ ಸಾಲಿನ ಅಂತ್ಯದ ವೇಳೆಗೆ ಹಣದ ಸಂಪನ್ಮೂಲವನ್ನನುಸರಿಸಿ, ಪೂರ್ಣಗೊಳಿಸುವ ಉದ್ದೇಶವಿದೆ.

ಇ) ತುಮಕೂರು ಉಪ ನಾಲೆಯ ಕಾಮಗಾರಿಗಳಿಗಾಗಿ ಮೇ ೯೦ರ ಅಂತ್ಯದವರೆಗೆ ೧೩೮.೭೨ ಕೋಟಿ ರೂ. ಗಳಷ್ಟು ವ್ಯಯವಾಗಿದೆ.